S. post 307476340 in

# ಕರ್ನಾಟಕ ಸರ್ಕಾರ

ಆರ್.ಡಿ./60/ಎಂಆರ್ಆರ್/2007(1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮ್ಮಡಿಗಳ ಕಟ್ಟಡ ಬೆಂಗಳೂರು.
ದಿನಾಂಕ: 06-10-2008

ಜಿಲ್ಲಾಧಿಕಾರಿಗಳ ಕಛೇರಿ
ಹಾಸನ ಜಿಲ್ಲೆ, ಹಾಸನ
16 OCT 2008

## ಸುತ್ತೋಲೆ

ವಿಷಯ:- ಆರ್.ಡಿ.ಎಸ್ ಕೋರಿಕೆಗಳನ್ನು ನಿರ್ವಹಿಸುವ ಕಾರ್ಯದಲ್ಲಿ ಕಂದಾಯ ಅಧಿಕಾರಿಗಳು ಹೆಬ್ಬೆಟ್ಟು ಗುರುತು/ಫಿಂಗರ್-ಪ್ರಿಂಟ್‌ಲಾಗಿನ್‌ನನ್ನು ಉಪಯೋಗಿಸುವ ಕುರಿತು.

*******

ತಾಲ್ಲೂಕು ಕಛೇರಿಗಳು ಮತ್ತು ಹೋಬಳಿ ಕೇಂದ್ರದ ಗ್ರಾಮಗಳಲ್ಲಿ ನೆಮ್ಮದಿ ಯೋಜನೆಯನ್ನು ಜಾರಿಗೊಳಿಸಿ ಈಗಾಗಲೇ ಒಂದು ವರ್ಷವೇ ಕಳೆದಿದೆ. ಸರ್ಕಾರಿ ಸೇವೆಗಳನ್ನು ಹೋಬಳಿ ಮಟ್ಟಕ್ಕೆ ವಿಕೇಂದ್ರೀಕರಿಸುವುದಕ್ಕೆ ಪೂರಕವಾಗುವಂತೆ ಗ್ರಾಮೀಣ ಟೆಲಿಸೆಂಟರುಗಳನ್ನು ಸರ್ಕಾರಿ ಕಛೇರಿಗಳಂತೆಯೇ ರೂಪಿಸಲಾಗಿದೆ. ಈ ಗ್ರಾಮೀಣ ಟೆಲಿ ಸೆಂಟರುಗಳು ಸರ್ಕಾರದಿಂದ ನಾಗರೀಕರಿಗೆ ಒದಗಿಸಲಾಗುವ ಸೇವೆಗಳನ್ನು ತಲುಪಿಸಲು ನೆರವಾಗುತ್ತವೆ. ಕಂದಾಯ ಇಲಾಖೆಯಿಂದ ಒದಗಿಸಲಾಗುವ ಜನನ-ಮರಣ ದಾಖಲೆಗಳು, ಜಾತಿ, ಆದಾಯ ದೃಢೀಕರಣಗಳು, ವೃದ್ಧಾಪ್ಯ ವೇತನಗಳು ಮೊದಲಾದ 39 ರೀತಿಯ ಸೇವೆಗಳನ್ನು ಒದಗಿಸಲು ಈ ಟೆಲಿ ಸೆಂಟರುಗಳು ಸನ್ನದ್ಧವಾಗಿವೆ.

ನೆಮ್ಮದಿ ಯೋಜನೆಯಡಿ ಕೋರಿಕೆಯ ನಿರ್ವಹಣೆಗಾಗಿ ಕೆಲವು ತಹಸೀಲ್ದಾರರು, ಕಂದಾಯ ನಿರೀಕ್ಷಕರು ಮತ್ತು ವಿಷಯ ನಿರ್ವಾಹಕರು ತಮ್ಮ ಡಿಜಿಟಲ್ ಸಹಿವುಳ್ಳ ಕಾರ್ಡ್/ ಪಾಸ್‌ವರ್ಡ್‌ನ್ನು ನೆಮ್ಮದಿ ಆಪರೆಟರುಗಳಿಗೆ ನೀಡುತ್ತಿರುವುದನ್ನು ಗಮನಿಸಲಾಗಿದೆ. ಈ ರೀತಿಯ ನಿರ್ಲಕ್ಷ್ಯತೆಯಿಂದ ಸಂಬಂಧಪಟ್ಟ ಕಂದಾಯ ಸಿಬ್ಬಂದಿಗಳು ಭೃಷ್ಟ ಅಭ್ಯಾಸಕ್ಕೆ ಒಳಪಡುವುದಲ್ಲದೆ, ತಮ್ಮ ಡಿಜಿಟಲ್ ಸಹಿವುಳ್ಳ ಕಾರ್ಡ್/ ಪಾಸ್‌ವರ್ಡ್‌ನ್ನು ಪಡೆದಿರುವವರಿಂದಾಗಬಹುದಾದ ದುರವ್ಯವಹಾರದ ಪರಿಣಾಮವನ್ನು ಎದುರಿಸಬೇಕಾಗಿರುತ್ತದೆ. ಆದ್ದರಿಂದ ಯಾವುದೇ ಸಂದರ್ಭದಲ್ಲಿ ಕಂಧಾಯ ನಿರೀಕ್ಷಕರು/ವಿಷಯ ನಿರ್ವಾಹಕರು ಪಾಸ್‌ವರ್ಡ್‌ಗಳನ್ನು ನೆಮ್ಮದಿ ಆಪರೇಟರಿಗೆ ನೀಡದಂತೆ ತಹಸೀಲ್ದಾರರು ಗಮನಿಸತಕ್ಕದ್ದು..

**ನೆಮ್ಮದಿ ಆವೃತ್ತಿ 2.1 ಅಳವಡಿಸಿದ ತಾಲ್ಲೂಕುಗಳಲ್ಲಿ ಇನ್ನು ಮುಂದೆ ಕಂದಾಯ ನಿರೀಕ್ಷಕರು ಹೋಬಳಿ ಟೆಲಿ ಕೇಂದ್ರಗಳಲ್ಲಿಯೇ ನೆಮ್ಮದಿ ಕೋರಿಕೆಗಳ ಸ್ವೀಕೃತಿಯನ್ನು, ಹೆಬ್ಬೆಟ್ಟು ಗುರುತು/ಫಿಂಗರ್-ಪ್ರಿಂಟ್‌ಲಾಗಿನ್ ಮೂಲಕವೇ ನೀಡತಕ್ಕದ್ದು.**

ತಹಸೀಲ್ದಾರರು ತನ್ನನ್ನು ಸೇರಿಸಿ, ಕಂದಾಯ ನಿರೀಕ್ಷಕರ ಮತ್ತು ವಿಷಯ ನಿರ್ವಾಹಕರ ಹೆಬ್ಬೆಟ್ಟು ಗುರುತನ್ನು ನೋಂದಾಯಿಸಿಕೊಳ್ಳಲು ಈ ಮೂಲಕ ಸೂಚಿಸಿದೆ. ಸಂಬ್ಬಂದಿಸಿದ ಕಂದಾಯ ನಿರೀಕ್ಷಕರು/ವಿಷಯ ನಿರ್ವಾಹಕರ ಹೆಬ್ಬೆಟ್ಟು ಗುರುತನ್ನು ನೋಂದಾಯಿಸಿಲಾಗಿದೆ ಎಂಬುದನ್ನು ಮುಂಜಾಗ್ರತೆಯಿಂದ ಪರಿಶೀಲಿಸಿ ದೃಢಪಡಿಸಿಕೊಳ್ಳತಕ್ಕದ್ದು. ಭೂಮಿ ತಂತ್ರಾಂಶದಲ್ಲಿ, ಕಂದಾಯ ಸಿಬ್ಬಂದಿಗಳ ಯಾವ ಹೆಬ್ಬಟ್ಟಿನ ಗುರುತನ್ನು ಅಳವಡಿಸಲಾಗಿದೆಯೋ ಅದೇ ಹೆಬ್ಬಟ್ಟಿನ ಗುರುತ್ತನ್ನು ನೋಂದಾಯಿಸತಕ್ಕದು.

ಜಿಲ್ಲಾಧಿಕಾರಿಗಳವರ ಕಛೇ
ಹಾಸನ ಜಿಲ್ಲೆ, ಹಾಸನ.
ದಿನಾಂಕ 29/12/08



ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ